28	ಉಡುಪಿ	5970	5936	11906
29	ಉತ್ತರಕನ್ನಡ	6954	4806	11760
30	ಯಾದಗಿರಿ	3310	4656	7966
	ಒಟ್ಟು	**330959**	**249874**	**580833**

ಸಾರ್ವಜನಿಕ ಗ್ರಂಥಾಲಯಗಳಲ್ಲಿ ನ್ಯೂನ್ಯತೆಗಳು

263 (904) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇ–ಔಟ್) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳೆಷ್ಟು? (ವಿವರ ನೀಡುವುದು)

ಆ) ಈ ಗ್ರಂಥಾಲಯಗಳಲ್ಲಿ ಓದುಗರಿಗೆ ಸರಿಯಾದ ಪೀಠೋಪಕರಣಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಪೀಠೋಪಕರಣ ಸರಬರಾಜು ಮಾಡಲು ಕೈಗೊಂಡ ಕ್ರಮಗಳೇನು;

ಇ) ಗ್ರಂಥಾಲಯಗಳಲ್ಲಿ ಹಳೆಯ ಪುಸ್ತಕಗಳೇ ಹೆಚ್ಚಾಗಿದ್ದು ಅದನ್ನು ಬದಲಿಸಲು ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು; (ಮಾಹಿತಿ ನೀಡುವುದು)

ಈ) ಗ್ರಂಥಾಲಯಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸದೇ ಇರುವುದಕ್ಕೆ ಕಾರಣವೇನು; ಯಾವಾಗ ಈ ಸೌಕರ್ಯಗಳನ್ನು ಕಲ್ಪಿಸಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು) :

ಅ) 1. ನಂದಿನಿ ಬಡಾವಣೆ ಶಾಖಾ ಗ್ರಂಥಾಲಯ

2. ಗೆಳೆಯರ ಬಳಗ ಸೇವಾ ಕೇಂದ್ರ ಗ್ರಂಥಾಲಯ

3. ಮಹಾಲಕ್ಷ್ಮೀಪುರಂ ಸೇವಾ ಕೇಂದ್ರ ಗ್ರಂಥಾಲಯ

4. ಬಯಲುರಂಗಮಂದಿರ ಸೇವಾ ಕೇಂದ್ರ ಗ್ರಂಥಾಲಯ

5. ನಾಗಪುರ ವಾಚನಾಲಯ

6. ಸತ್ಯನಾರಾಯಣ ಬಡಾವಣೆ ವಾಚನಾಲಯ
7. ಜೈಮಾರುತಿನಗರ ವಾಚನಾಲಯ
8. ಕಮಲಾನಗರ

ಆ) ಬಂದಿದೆ.

ಆಯ-ವ್ಯಯದ ಮಿತಿಯಲ್ಲಿ ನಿಯಮಾನುಸಾರ ಅಗತ್ಯತೆಗೆ ಹಾಗೂ ಬೇಡಿಕೆಗೆ ಅನುಸಾರವಾಗಿ ಪೀಠೋಪಕರಣಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಇ) ಗ್ರಂಥಾಲಯಗಳಲ್ಲಿರುವ ಹಳೆಯ ಪುಸ್ತಕಗಳನ್ನು ವಿಲೇವಾರಿ ಮಾಡುವ ಸಂಬಂಧದಲ್ಲಿ ಪುಸ್ತಕಗಳ ಲಭ್ಯತೆ ಹಾಗೂ ಪ್ರಾಮುಖ್ಯತೆ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ವಿಲೇವಾರಿ ಮಾಡಲಾಗುವುದು.

ಈ) ಇಲಾಖೆಯ ಸ್ವಂತ ಗ್ರಂಥಾಲಯ ಕಟ್ಟಡಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗಿದೆ. ನಂದಿನಿ ಬಡಾವಣೆಯಲ್ಲಿರುವ ಶಾಖಾ ಗ್ರಂಥಾಲಯದಲ್ಲಿ ಈ ಹಿಂದೆ ಬೋರ್‌ವೆಲ್‌ನಿಂದ ನೀರಿನ ಸೌಲಭ್ಯ ಹೊಂದಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಬೋರ್‌ವೆಲ್‌ನಲ್ಲಿ ನೀರಿರುವುದಿಲ್ಲ. ಕಾರಣ ಹೊರಗಿನಿಂದ ಟ್ಯಾಂಕರ್‌ನಲ್ಲಿ ನೀರನ್ನು ತರಿಸಿ ಒದಗಿಸಲಾಗುತ್ತಿದೆ. ಸದ್ಯದಲ್ಲಿಯೇ ನೀರಿನ ವ್ಯವಸ್ಥೆಯನ್ನು ಮಾಡಲು ಕ್ರಮ ಕೈಗೊಳ್ಳಲಾಗುವುದು. ಬಿ.ಬಿ.ಎಂ.ಪಿ. ಹಾಗೂ ಖಾಸಗಿ (ಬಾಡಿಗೆ) ಕಟ್ಟಡಗಳಲ್ಲಿ ಗ್ರಂಥಾಲಯ ಸೇವೆಯನ್ನು ಒದಗಿಸಲಾಗುತ್ತಿದ್ದು ಮೂಲಭೂತ ಸೌಲಭ್ಯ ಹೊಂದಿಲ್ಲದಿರುವ ಕಡೆ ಸಂಬಂಧಿಸಿದ ಸಂಸ್ಥೆ ಹಾಗೂ ಮಾಲೀಕರಿಗೆ ಪತ್ರ ಬರೆದು ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ ಕ್ರಮ ಜರುಗಿಸಲಾಗುವುದು.

ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನ

298 (725) ಶ್ರೀ ಶಿವಶಂಕರ್ ರೆಡ್ಡಿ (ಗೌರಿಬಿದನೂರು) :- ಮಾನ್ಯ ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಅಂಗವಿಕಲರಿಗೆ ನೀಡುತ್ತಿದ್ದ ಮಾಸಾಶನ ಸಧ್ಯಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಂಜೂರಾತಿ ನಿಲ್ಲಿಸಲು ಕಾರಣವೇನು; ಇದರಿಂದ ಅಂಗವಿಕಲರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು):-